# ಕರ್ನಾಟಕ  ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ :   09-03-2021                    ಪ್ರಶ್ನೆ ಸಂಖ್ಯೆ :   695(806)

ಸದಸ್ಯರ ಹೆಸರು ಮತ್ತು ಕ್ಷೇತ್ರ :   ಶ್ರೀ ಎಂ. ನಾರಾಯಣಸ್ವಾಮಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ :   09-03-2021

ಉತ್ತರಿಸುವ ಸಚಿವರು:   ಮಾನ್ಯ ಗಣಿ ಮತ್ತು ಭೂ ವಿಜ್ಞಾನ ಸಚಿವರು

ವಿಷಯ :   ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟುವ ಬಗ್ಗೆ

(ಅ) ಅಕ್ರಮ ಗಣಿಗಾರಿಕೆಯನ್ನು ಸಕ್ರಮ ಮಾಡಲು ಹೊರಟಿರುವ ಸರ್ಕಾರ ಸಕ್ರಮಕ್ಕೆ ಹಾಕುತ್ತಿರುವ ಮಾನದಂಡಗಳು ಯಾವುವು;

(ಆ) ಈಗಾಗಲೇ ಲೈಸೆನ್ಸ್ ಇಲ್ಲದೆ ಅಕ್ರಮವಾಗಿ ಗಣಿಗಾರಿಕೆ ಮಾಡಿರುವ ಹಾಗೂ ಮಾಡುತ್ತಿರುವವರ ವಿರುದ್ಧ ಯಾವ ಕ್ರಮ ಜರುಗಿಸಲಾಗಿದೆ;

(ಇ) ಶಿವಮೊಗ್ಗ ಸೇರಿದಂತೆ ಚಿಕ್ಕಬಳ್ಳಾಪುರದಲ್ಲಿ ನಡೆದ ಭಾರಿ ಸ್ಫೋಟದ ಹಿನ್ನಲೆಯಲ್ಲಿ ಆ ಎರಡು ಕ್ರಷರ್ ಮಾಲೀಕರು ಗಣಿಗಾರಿಕೆ ಲೈಸೆನ್ಸ್ ಹೊಂದಿದ್ದಾರೆಯೇ;

(ಈ) ಹೊಂದಿದ್ದಲ್ಲಿ, ಅವರ ಲೈಸೆನ್ಸ್ ಅನ್ನು ರದ್ದುಗೊಳಿಸುವ ಯೋಚನೆ ಸರ್ಕಾರದ ಗಮನದಲ್ಲಿದೆಯೇ;

(ಉ) ಎರಡೂ ಸ್ಫೋಟಗಳಿಂದ ಜೀವ ಹಾನಿಯಾಗಿದ್ದು ಇದಕ್ಕೆ ಇಲಾಖೆಯಿಂದ ಪರಿಹಾರ ನೀಡಲಾಗಿದೆಯೇ? (ಸಂಪೂರ್ಣ ಮಾಹಿತಿಯನ್ನು ವಿವರಣೆಗಳೊಂದಿಗೆ ನೀಡುವುದು)